**ಸಿ.ಸಿ. ನಂಬ್ರ: 3002/2019** **PW-2**

ದಿನಾಂಕ: 31.01.2026

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಕೆ ಯು ಎಸ್ ರವರಿಂದ:</u>**

ನಾನು ಈಗ ಬೇಳೂರಿನಲ್ಲಿ ಹೆಂಡತಿ ಮನೆಯಲ್ಲಿ ವಾಸವಾಗಿರುತ್ತೇನೆ. ನಾನು ದುಬೈಯಲ್ಲಿ ಕೆಲಸ ಮಾಡುತ್ತಿದ್ದೆ. ನಮ್ಮ ಮನೆ ಮೊಳಹಳ್ಳಿ ಬಿದ್ಕಲ್ ಕಟ್ಟೆ. ಹೆಂಡತಿ ಮನೆಯಲ್ಲಿ ಸುಮಾರು 25 ವರ್ಷಗಳಿಂದ ವಾಸವಾಗಿದ್ದೇನೆ. 1ನೇ ಆರೋಪಿ ನನ್ನ ಹೆಂಡತಿಯ ತಂಗಿ ಗಂಡ. 2ನೇ ಆರೋಪಿ ನನ್ನ ಹೆಂಡತಿಯ ತಂಗಿ. ಅವರು ಬೆಂಗಳೂರಿನ ವಾಸಿಗಳು. ಅವರು ಮದುವೆಗೂ ಪೂರ್ವದಲ್ಲಿ ಬೇಳೂರಿನಲ್ಲಿ ತಾಯಿಯೊಂದಿಗೆ ವಾಸವಾಗಿದ್ದರು ಎಂದರೆ ಸರಿ. ಮದುವೆಯಾದ ನಂತರ ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ಚಾಸಾ-1 ಆಕೆಯ ತಾಯಿಯೊಂದಿಗೆ ಊರಿನಲ್ಲಿ ಇದ್ದರು. ನಮ್ಮ ಅತ್ತೆಗೆ ಒಟ್ಟು 4 ಜನ ಮಕ್ಕಳು.

1ನೇ ಆರೋಪಿ ಈಗ ಬನ್ನಾಡಿಯಲ್ಲಿ ವಾಸವಾಗಿದ್ದಾರೆ. 2ನೇ ಆರೋಪಿ ಗಲಾಟೆಯಾದ ನಂತರ ಬೇಳೂರಿಗೆ ಬರುತ್ತಿಲ್ಲ. ಮೊದಲಿಗೆ ಬರುತ್ತಿದ್ದರು. ಪ್ರಕರಣ ದಾಖಲಿಸಿದ ಕಾರಣ ನಾವು ಬರಲು ಬಿಡುವುದಿಲ್ಲ ಎಂದರೆ ಕ್ರಿಮಿನಲ್ ಪ್ರಕರಣವಾಗಿರುತ್ತದೆ, ಮುಂದೆ ಹಲ್ಲೆ ಮಾಡಬಹುದು ಎಂಬ ಭಯ ಇರುತ್ತದೆ. ನನ್ನ ಮತ್ತು ನನ್ನ ಹೆಂಡತಿಯ ವಿರುದ್ಧ ಕ್ರೈಂ ನಂಬ್ರ 278/2018 ರಂತೆ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ಅವರು ಪ್ರಕರಣ ದಾಖಲಿಸಿದ 1 ದಿನದ ನಂತರ ನಾವು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸಾಕ್ಷಿ ಚಾಸಾ-1 ರವರು ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ.

ನನ್ನ ಮಾವ ಅಣ್ಣಪ್ಪ ಶೆಟ್ಟಿ. ಆತ ಮೃತಪಟ್ಟಿರುತ್ತಾರೆ. ಅವರು ಮುಂಬೈಯಲ್ಲಿ ಕೆಲಸ ಮಾಡುತ್ತಿದ್ದರು. ಅವರುಬ ಬೇಳೂರಿನಲ್ಲಿ ಸಾಕಷ್ಟು ಆಸ್ತಿಗಳನ್ನು ಖರೀದಿಸಿದ್ದರು ಎಂದರೆ ಸಾಕ್ಷಿ 5 ಎಕರೆ ಇರುತ್ತದೆ ಎಂದು ನುಡಿಯುತ್ತಾರೆ. ಆಸ್ತಿಗೆ ಸಂಬಂಧಿಸಿದಂತೆ ನಮ್ಮ ಮತ್ತು ಆರೋಪಿತರ

ನಡುವೆ ವ್ಯಾಜ್ಯ  ಇರುತ್ತದೆ ಎಂದರೆ ಸರಿ. ಅದು ಓ ಎಸ್ ನಂಬ್ರ 33/2019 ರಂತೆ ಬಾಕಿ ಇರುತ್ತದೆ. ಅದನ್ನು ಚಾಸಾ-1 ಮತ್ತು ಸಹೋದರರ ವಿರುದ್ಧ 2ನೇ ಆರೋಪಿ ವಿಭಾಗಕ್ಕಾಗಿ ದಾಖಲಿಸಿರುತ್ತಾರೆ ಎಂದರೆ ಸರಿ.  ಪ್ರಸನ್ನ ನನ್ನ ಭಾವ ನೆಂಟನಾಗಿದ್ದು ಆತ ನಮ್ಮ ಅತ್ತೆಯಿಂದ ಆಸ್ತಿಯನ್ನು ಬರೆಯಿಸಿಕೊಂಡಿರುತ್ತಾರೆ ಎಂದರೆ ಸರಿ. ಅದರಲ್ಲಿ  ಮನೆ ನಿರ್ಮಿಸಿರುತ್ತಾರೆ ಎಂದರೆ ಸರಿ. 2ನೇ ಆರೋಪಿ ಆಸ್ತಿ ಕೇಳಿದಾಗ ಪ್ರಸನ್ನರವರು ಕೊಡಲು ನಿರಾಕರಿಸಿರುತ್ತಾರೆ ಎಂದರೆ ಸರಿಯಲ್ಲ. ಆಸ್ತಿ ವಿಭಾಗದ ಬಗ್ಗೆ ಮಾತನಾಡುತ್ತಿದ್ದಾಗ ಗಲಾಟೆಯಾಗಿರುತ್ತದೆ. ಆರೋಪಿತರು ನಮ್ಮಿಂದ ಸ್ವಲ್ಪ ಹಣ ಪಡೆದಿರುತ್ತಾರೆ. ಅದನ್ನು ಹಿಂದುರುಗಿಸಿದ ನಂತರ ವಿಭಾಗ ಮಾಡಿಕೊಳ್ಳುವುದಾಗಿ ನಾವೆಲ್ಲರೂ ತಿಳಿಸಿರುತ್ತೇವೆ. ಅಂತಹ ಯಾವುದೇ ಹಣವನ್ನು 2ನೇ ಆರೋಪಿ ನಮ್ಮಿಂದ ಸಾಲವಾಗಿ ಪಡೆದಿಲ್ಲ ಎಂದರೆ ಸರಿಯಲ್ಲ.

ಮೊದಲಿಗೆ 1ನೇ ಆರೋಪಿ ಗಲಾಟೆ ಪ್ರಾರಂಭಿಸಿರುತ್ತಾರೆ. ನಾವೆಲ್ಲರೂ 2ನೇ ಆರೋಪಿಗೆ ಪಾಲು ನೀಡುವುದಿಲ್ಲ ಎಂದು ಗಲಾಟೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಪ್ರಸನ್ನ ಶೆಟ್ಟಿ ರವರು ಸೇರಿ 2ನೇ ಆರೋಪಿಗೆ ಸದ್ರಿ ದಿನ ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅವರು ದೂರು ದಾಖಲಿಸಿದ ನಂತರ ನಾವು ಆರೋಪಿತರ ವಿರುದ್ಧ ಈ ಸುಳ್ಳು ದೂರನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಈಗ ಆಸ್ತಿಯಿಂದ ಇರುವ ಸುಮಾರು 10-15 ಲಕ್ಷ ಆದಾಯವನ್ನು ನಾನು ಮತ್ತು ಚಾಸಾ1 ರವರು ಅನುಭವಿಸುತ್ತಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ಊರಿಗೆ ಬಂದರೆ ಆಸ್ತಿ ಮತ್ತು ಉತ್ಪತ್ತಿಯಲ್ಲಿ ಭಾಗ ಕೊಡಬೇಕಾಗುತ್ತದೆ ಎಂಬ ಕಾರಣದಿಂದ ಅವರನ್ನು ಮನೆಗೆ ಬರಲು ಬಿಡುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-2 ರವರನ್ನು ಹಲ್ಲೆ ಮಾಡಿರುವ ಬಗ್ಗೆ ದೂರು ನೀಡಿರುತ್ತೇವೆ. ಆ ಬಗ್ಗೆ ದಾಖಲೆ ಇರಬಹುದು.

ಘಟನೆ ನಮ್ಮ ಮನೆಯ ಅಂಗಳದಲ್ಲಿ ನಡೆದಿರುತ್ತದೆ ಎಂದರೆ ಸರಿ.  ಅಪಾದಿಸಿರುವಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ

ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಆರೋಪಿತರಿಂದ ಆಸ್ತಿಯನ್ನು ಲಪಾಟಿಸುವ ಉದ್ದೇಶದಿಂದ ಅವರ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ